ಶಿಕ್ಷಣದಿಂದ ಶ್ರೇಷ್ಠತೆ

# ಎಸ್.ಬಿ.ಆರ್.ಆರ್. ಮಹಾಜನ ಪ್ರಥಮದರ್ಜೆಕಾಲೇಜು (ಸ್ವಾಯತ್ತ)

ಜಯಲಕ್ಷ್ಮೀಪುರಂ, ಮೈಸೂರು– 570 012

ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ

ಶ್ರೇಷ್ಠತೆಯ ಸಾಮರ್ಥ್ಯವಿರುವಕಾಲೇಜು

ದಿನಾಂಕ: 29.03.2022

## ಪ್ರಕಟಣೆಯ ಕೃಪೆಗಾಗಿ

ಇವರಿಗೆ,

ಸಂಪಾದಕರ ಸನ್ನಿಧಾನಕ್ಕೆ

______________________ದಿನಪತ್ರಿಕೆ

ಮೈಸೂರು

ಮಾನ್ಯರೆ,

## ಮಹಾಜನ ಕಾಲೇಜಿನ ರಾ.ಸೇ.ಯೋ. ವಾರ್ಷಿಕ ವಿಶೇಷ ಶಿಬಿರದ ಮಹಾವಾಣಿ ಮಾಸಪತ್ರಿಕೆ ಬಿಡುಗಡೆ



ಮೈಸೂರು, ಮಾ. 29 – 'ಆರೋಗ್ಯಕರ ಭಾರತಕ್ಕಾಗಿ ಆರೋಗ್ಯಕರ ಯುವಜನತೆ' ಎಂಬ ಶೀರ್ಷಿಕೆಯಡಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾ.ಸೇ.ಯೋ. ಘಟಕಗಳ ವತಿಯಿಂದ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು ಹುನುಗನಹಳ್ಳಿ ಗ್ರಾಮದಲ್ಲಿ ಒಂದು ವಾರದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದ ವಿಶೇಷ ಸಂಚಿಕೆಯನ್ನು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು 'ಮಹಾವಾಣಿ' ಮಾಸಪತ್ರಿಕೆ (ರಾ.ಸೇ.ಯೋ. ವಿಶೇಷ ಸಂಚಿಕೆ) ಯನ್ನು ಮಹಾಜನ ವಿದ್ಯಾ ಸಂಸ್ಥೆಯ ಗೌ. ಕಾರ್ಯದರ್ಶಿಗಳಾದ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್ ಅವರು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಗಳಾದ ಪ್ರೊ. ಪಿ. ಸರೋಜಮ್ಮ, ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಶ್ರೀ ಎಲ್. ರವಿಐಯ್ಯರ್, ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ರಾ.ಸೇ.ಯೋಜನೆಯ ಕಾರ್ಯಕ್ರಮಾಧಿಕಾರಿಗಳಾದ ಡಾ. ದೊಡ್ಡರಸಯ್ಯ ಜಿ ಮತ್ತು ಶ್ರೀ ಸಿದ್ದರಾಜು ಸಿ.ಎಸ್. ಅವರುಗಳು ಉಪಸ್ಥಿತರಿದ್ದರು.

**ಪ್ರಾಂಶುಪಾಲರು**